ಕರ್ನಾಟಕ ವಿಧಾನ ಸಭೆ

ಸೋಮವಾರ 29ನೇ ಜುಲೈ 1997ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

1) ಸಭಾಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿದ್ಯುತ್ ದರ ಏರಿಕೆ ಬಗ್ಗೆ

(ನಿಲುವಳಿ ಸೂಚನೆ ಮಂಡನೆಗೆ ಕೋರಿ ಚರ್ಚೆ)

+ ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಮಗೆ ಈ ವಿದ್ಯುತ್ ದರವನ್ನು ಜಾಸ್ತಿ ಮಾಡಿರುವ ಬಗ್ಗೆ ನಿಲುವಳಿ ಸೂಚನೆ ಮೂಲಕ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ.

ಅಧ್ಯಕ್ಷರು : ನಾನು ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳುತ್ತೇನೆ

ಶ್ರೀ ಬಿ. ಎಸ್. ಯಡಿಯೂರಪ್ಪ : ಇಡೀ ರಾಜ್ಯದ ಪ್ರತಿಯೋಬ್ಬ ವ್ಯಕ್ತಿಗೂ ಇದು ಅನ್ವಯವಾಗುವುದರಿಂದ...

ಅಧ್ಯಕ್ಷರು : ನಾನು ಒಪ್ಪಿದ್ದೇನೆ. ನಾನೂ ಈ ರಾಜ್ಯದ ಪ್ರಜೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು ಏನಾದರೂ ವಿಶೇಷ ಸಂದರ್ಭ ಎಂದು ಹೇಳಿ ಈಗ ಪ್ರಶ್ನೋತ್ತರವೇಳೆಯನ್ನು ರದ್ದು ಮಾಡಬೇಕು. ನಾವು ತಮ್ಮ ಕೊಠಡಿಯಲ್ಲಿ ಪ್ರಶ್ನೋತ್ತರ ವೇಳೆ ನಡೆಯಬೇಕು ಎಂದು ಒಪ್ಪಿಕೊಂಡಿದ್ದೇವೆ. ಆದರೆ ಇದು ವಿಶೇಷ ಸಂದರ್ಭ, ನಾಲ್ಕೂಮುಕ್ಕಾಲು ಕೋಟಿ ಜನ ನಾವೇನು ಮಾಡುತ್ತಿದ್ದೇವೆ ಎಂದು ನೋಡುತ್ತಿರುವ ಕಾಲದಲ್ಲಿ ತಾವೇನೇ ಸರ್ಕಾರಕ್ಕೆ ತರಾಟೆಗೆ ತೆಗೆದುಕೊಂಡು ಇದನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿಬಿಟ್ಟರೆ ಅಥವಾ ಮುಖ್ಯಮಂತ್ರಿಗಳೇ ಎದ್ದುನಿಂತುಕೊಂಡು ಮುನ್ನೂರು ಕೋಟಿ ರೂಪಾಯಿ ತೆರಿಗೆ ಹಾಕಿರುವುದನ್ನು ಬೇಷರತ್ತಾಗಿ ವಾಪಸ್ಸು ತೆಗೆದುಕೊಳ್ಳುತ್ತೇವೆ, ಚರ್ಚೆ ಮಾಡೋಣ ಎಂದು ಹೇಳಿದರೂ ಸರಿ. ಇಲ್ಲದಿದ್ದರೆ ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ ಇದಕ್ಕೆ ಏನಾದರೂ ಅವಕಾಶ ಮಾಡಿಕೊಡುತ್ತೀರೋ?

ಅಧ್ಯಕ್ಷರು : ನಾನು ತಮ್ಮಲ್ಲಿ ಇಷ್ಟೇ ವಿನಂತಿಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರುಗಳು ಏನು ಪ್ರಶ್ನೆ ಕಳುಹಿಸಿದವರಿದ್ದಾರೆ, ಇದು ಅವರ ಹಕ್ಕಿನ ಪ್ರಶ್ನೆ. ಅವರಿಗೆ ಅವಕಾಶ

ಮಾಡಿಕೊಡೋಣ. ವಿಷಯ ಗಂಭೀರತೆಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಪ್ರಶ್ನೋತ್ತರ ಆದತಕ್ಷಣ ಇದನ್ನು ತೆಗೆದುಕೊಳ್ಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇವೆ.

ಅಧ್ಯಕ್ಷರು : ಎಲ್ಲರೂ ಕಳುಹಿಸಿಕೊಟ್ಟಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರೂ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಹೇಳುವುದು ಏನೆಂದರೆ ಈಗಾಗಲೇ ತಾವು ಒಪ್ಪಿಕೊಂಡಿದ್ದೀರಿ. ತಮ್ಮ ಚೇಂಬರ್‌ನಲ್ಲಿ ಕುಳಿತುಕೊಂಡಿದ್ದಾಗ ನಾವು ತಮ್ಮನ್ನು ಕೇಳಿಕೊಂಡಿದ್ದೇವೆ. ಈ ಒಂದು ನಿಲುವಳಿ ಸೂಚನೆಗೆ ಅನುಮತಿ ಕೊಡಬೇಕು, ಪ್ರಶ್ನೋತ್ತರಕ್ಕೆ ಮುಂಚೆ ಇದಕ್ಕೆ ಅನುಮತಿ ಕೊಡಬೇಕೆಂದು ಕೇಳಿಕೊಂಡಿದ್ದೆವು. ಹಾಗೆ ಕೇಳಿಕೊಂಡಾಗ ತಾವು ಹೇಳಿದಿರಿ, ಪ್ರಶ್ನೋತ್ತರ ಆದಮೇಲೆ ಇದನ್ನು ತೆಗೆದುಕೊಳ್ಳುತ್ತೇನೆ ಎಂದು. ಏಕೆಂದರೆ ಪ್ರಶ್ನೋತ್ತರ ಕಾಲದಲ್ಲಿ ಅನೇಕ ಸದಸ್ಯರು ತಮ್ಮ ಉತ್ತರಗಳನ್ನು ಅಪೇಕ್ಷೆ ಮಾಡುತ್ತಿದ್ದಾರೆ ಮತ್ತು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಒಪ್ಪಿದಹಾಗೆ ಪ್ರಶ್ನೋತ್ತರಕ್ಕೆ ಅನುಮತಿ ಕೊಟ್ಟು ಉಳಿದ ಸಮಯದಲ್ಲಿ ಕೂಡಲೇ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ ಎಂದು ತಾವು ಹೇಳಿದ್ದೀರಿ. ನಾನು ದಯಮಾಡಿ ಈಗಾಗಲೇ ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ನಾನು ಪ್ರಸ್ತಾಪ ಮಾಡುವುದು ಇಷ್ಟೆ. ಈಗ ತಾವು ಕೂಡಲೇ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ ಎಂದರೆ ನಮ್ಮ ಅಭ್ಯಂತರ ಇಲ್ಲ. ಏಕೆಂದರೆ ನಾವು ಒಟ್ಟಾರೆ ಈ ವಿಷಯದ ಗಂಭೀರತೆಯನ್ನು ತಿಳಿದುಕೊಂಡು ಪ್ರಸ್ತಾಪ ಮಾಡಬೇಕಾಗಿದೆ. ಇದರಲ್ಲಿ ಹೆಚ್ಚು ಅನುಕೂಲವಾಗತಕ್ಕದ್ದು ತಮ್ಮ ಜಿಲ್ಲೆಗೆ ಮಾನ್ಯ ಅಧ್ಯಕ್ಷರೇ. ಹೊಡೆತಾನೂ ತಮ್ಮ ಜಿಲ್ಲೆಗೆ. ಅನುಕೂಲ ಏನಾದರೂ ಇದರಲ್ಲಿ ಸಿಕ್ಕರೆ ತಮ್ಮ ಜಿಲ್ಲೆಗೆ ಹೆಚ್ಚು ಸಿಗುತ್ತದೆ.

ಅಧ್ಯಕ್ಷರು : ನನಗೆ ಗೊತ್ತಿದೆ. ಇಡೀ ವಿರೋಧಪಕ್ಷದವರು ನನ್ನ ಶ್ರೆಯೋಭಿಲಾಷಿಗಳು ಎಂಬುದು ನನಗೆ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬರೇ ಶ್ರೀನಿವಾಸಪುರ ಅಲ್ಲ, ಇಡೀ ಜಿಲ್ಲೆಗೆ ಎಂದು ಹೇಳುತ್ತಿದ್ದೇನೆ. ಮತ್ತೆ ಅತಿಹೆಚ್ಚು ಪಂಪ್‌ಸೆಟ್ಟುಗಳು ಇರತಕ್ಕದ್ದು ಕೋಲಾರ್ ಮತ್ತು ಬೀದರ್ ಜಿಲ್ಲೆಯಲ್ಲಿ. ಆದಕ್ಕಾಗಿ ಇದು ಸಾರ್ವಜನಿಕ ಮಹತ್ವದ ವಿಷಯ ಇರುವ ಕಾರಣ ಇದನ್ನು ನಾವು ಪಸ್ತಾಪ ಮಾಡುತ್ತಿದ್ದೇವೆಯೇ ಹೊರತಾಗಿ ಮತ್ತೇನೂ ಇಲ್ಲ. ತಾವು ಪ್ರಶ್ನೋತ್ತರವಾದ ಮೇಲೆ ಅವಕಾಶ ಕೊಡುತ್ತೇನೆ ಎಂದು ಹೇಳಿದರೆ ನಮ್ಮ ವಿರೋಧ ಇಲ್ಲ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿದ ತಕ್ಷಣ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಹಿಂದೆ ಅನೇಕ ಸಂದರ್ಭಗಳಲ್ಲಿ ಈ ಸದನದಲ್ಲಿ ಇಂತಹ ಸಮಸ್ಯೆಗಳು ಬಂದಾಗ ಪ್ರಶ್ನೋತ್ತರವನ್ನು ಹಿಂದೆ ಹಾಕಿ ನಿಲುವಳಿ ಸೂಚನೆಯನ್ನು ತೆಗೆದುಕೊಂಡಿರತಕ್ಕಂಥ ಸಂಪ್ರಾದಾಯಗಳು ಆಗಿವೆ. ಅದಕ್ಕಾಗಿ ತಾವು ದಯವಿಟ್ಟು ಈ ಸಂಪ್ರದಾಯವನ್ನು ಸ್ವಲ್ಪ ನೆನಪಿಸಿಕೊರಂಡರೆ ಒಳ್ಳೆಯದು. ಇದು ಬಹಳ ಸಂಪ್ರದಾಯವನ್ನು ಸ್ವಲ್ಪ ನೆನಪಿಸಿಕೊಂಡರೆ ಒಳ್ಳೆಯದು. ಇದು ಬಹಳ ಪ್ರಾಮುಖ್ಯವಾದ ವಿಷಯ. ವಿದ್ಯುಚ್ಛಕ್ತಿ ಬಗ್ಗೆ ಅತಿಯಾದ ಪ್ರಾಮುಖ್ಯತೆ ಇದೆ. ದಯವಿಟ್ಟು ಈಗಲೇ ಈ ವಿಷಯವನ್ನು ತೆಗೆದುಕೊಂಡರೆ ಒಳ್ಳೆಯದು ಎಂಬುದು ನಮ್ಮೆಲ್ಲರ ಒತ್ತಾಯ.

ಅಧ್ಯಕ್ಷರು : ಜ್ಞಾಪಕ ಮಾಡಿದ್ದು ಒಳ್ಳೆಯದಾಯಿತು. ಬೇರೆ ಸಂದರ್ಭದಲ್ಲಿ ಅದನ್ನು ಆಲೋಚನೆ ಮಾಡೋಣ. ಇವತ್ತು ಪ್ರಶ್ನೋತ್ತರ ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರ.

2) ಚುಕ್ಕಿ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಮಂಗಳೂರಿನಲ್ಲಿ ನೂತನ ಕಾರಾಗೃಹ ನಿರ್ಮಾಣ.

242(2095)-ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ, ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಂಗಳೂರು ಸಬ್ ಜೈಲಿನಲ್ಲಿರುವ ಖೈದಿಗಳ ಸಂಖ್ಯೆ ಎಷ್ಟು?

ಆ) ಮಂಗಳೂರು ಕಾರಾಗೃಹದ ಹಳೆಯ ಕಟ್ಟಡವಾಗಿದ್ದು, ಖೈದಿಗಳು ತಪ್ಪಿಸಿಕೊಂಡು ಹೋಗುತ್ತಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಕಾರಾಗೃಹವನ್ನು ಎಲ್ಲಿಗೆ ಯಾವಾಗ ಸ್ಥಳಾಂತರಿಸಲಾಗುವುದು?

ಈ) ನೂತನ ಕಾರಾಗೃಹದ ಅಂದಾಜು ವೆಚ್ಚ ಎಷ್ಟು?

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕರ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು)

ಅ) ದಿನಾಂಕ 22-7-97 ರಲ್ಲಿದ್ದಂತೆ 187 ಪುರುಷ ಮತ್ತು 3 ಮಹಿಳೆಯರು ಸೇರಿ ಒಟ್ಟು 190 ಖೈದಿಗಳಿದ್ದಾರೆ.

ಆ) ಹೌದು